ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದಹಾಗೆ ೫೦ರಿಂದ ೫೬ ಕೋಟಿ ರೂಪಾಯಿಗಳಲ್ಲಿ ಕಾರವಾರ ಜಿಲ್ಲೆಗೆ ೨೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾವು ಇನ್ನೂ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಹೇಳಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದ್ದೇವೆ. ಈಗಾಗಲೇ ಬಡ್ಜೆಟ್‌ನ್ನು ತಯಾರು ಮಾಡಿರುತ್ತೇವೆ. ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಕೊಡುವುದಕ್ಕೆ ಸಾಧ್ಯವಿಲ್ಲ. ಲ್ಯಾಂಡ್ ರೆವಿನ್ಯೂವನ್ನು ಆಯಾ ಇಲಾಖೆಗೆ ಹಂಚಬೇಕಾಗಿರುವುದರಿಂದ ಅದನ್ನು ಯೋಚನೆ ಮಾಡಲಿಕ್ಕೆ ಸಾಧ್ಯವಿಲ್ಲ.

ಬದಡಿ ಗ್ರಾಮಕ್ಕೆ ಪಶುವೈದ್ಯ ಶಾಲೆ

೮೨೮. ಶ್ರೀ ಬಾಬುರೆಡ್ಡಿ ತುಂಗಳ(ಬೀಳಗಿ).—ಮಾನ್ಯ ರೇಷ್ಮೆ ವ್ಯವಸಾಯ, ಪಶು ಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದಲ್ಲಿ ಪಶುವೈದ್ಯ ಶಾಲೆಯಿರುವುದು ಸರ್ಕಾರದಪರಿಗಮನಕ್ಕೆ ಬಂದಿದೆಯೆ

ಆ) ಹಾಗಿದ್ದಲ್ಲಿ, ಸದರಿ ಗ್ರಾಮದಲ್ಲಿ ಪಶುವೈದ್ಯ ಶಾಲೆಯು ಕಟ್ಟಡ ನಿರ್ಮಾಣದ ವಿಷಯವು ಪರಿಶೀಲನೆಯಲ್ಲಿದೆಯೆ

ಇ) ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚವೆಷ್ಟು ಹಾಗೂ ನಿರ್ಮಾಣ ಕಾರ್ಯ ಯಾವಾಗ ಆರಂಭಿಸಲಾಗುವುದು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಸಚಿವರು).—

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮೊದಲು ನನ್ನ ಸ್ವಂತ ಗ್ರಾಮವಾದ ಬಿದರಿಯಲ್ಲಿ ಪಶುವೈದ್ಯ ಶಾಲೆಗೆ ಹೊಸ ಕಟ್ಟಡ ಕಟ್ಟಿಸಿಕೊಡುವ ಬಗ್ಗೆ ಮಾನ್ಯ ಸಚಿವರನ್ನು ವಿನಂತಿಸಿದ್ದೆ. ೬ ತಿಂಗಳ ನಂತರ ಡಿಡಿಸಿ. ಮೀಟಿಂಗ್‌ನಲ್ಲಿ ಇಲಾಖೆಯ ಉಪ ನಿರ್ದೇಶಕರು ಈಗಾಗಲೇ ಪಶುವೈದ್ಯಶಾಲೆ ಇದೆ, ಅದಕ್ಕೆ ಸ್ವಂತ ಕಟ್ಟಡ ಕಟ್ಟಿಸಿಕೊಡುತ್ತೇವೆಂದು ಹೇಳಿದ್ದರು. ಮತ್ತೆ ೩ ತಿಂಗಳ ನಂತರ ಕೇಳಿದಾಗ ಉತ್ತರ ಬರಲಿಲ್ಲ. ಆಮೇಲೆ ಸಚಿವರಿಗೆ ಬರದೆ. ಆವರು ನಮ್ಮ ಕೈಗೊಳ್ಳುತ್ತೇವೆಂದು ಬರೆದರು. ಆ ಪತ್ರವನ್ನು ಉಪ ನಿರ್ದೇಶಕರಿಗೆ ಒಯ್ದು ತೋರಿಸಿದೆ. ನಿವೇಶನ ಬೇಕು ಎಂದರು, ೨೦೦ ಅಡಿ ಅಳತೆಯ ನಿವೇಶನವನ್ನು ಗೊತ್ತು ಮಾಡಿ ತೋರಿಸಿದೆ. ಸರ್ಕಾರದಿಂದ ೫೫ ಸಾವಿರ ರೂಪಾಯಿ ಮಂಜೂರಾಗಿ ಬಂದಿವೆ, ಅಡಿಗಲ್ಲು ಹಾಕಿಸಿ ಎಂದರು. ಆದರೆ ಈಗ ಪ್ರಶ್ನೆ ಕೇಳಿದ್ದಕ್ಕೆ ಬಂದಿದೆ, ಇಲ್ಲ, ಉದ್ಭವಿಸುವುದಿಲ್ಲ ಎಂದು ಮಾತ್ರ ಹೇಳುವ ಉತ್ತರ ಬಂದಿದೆ ಕೃಷ್ಣ ನದಿಯ ದಂಡೆ ಮೇಲಿರುವ ದೊಡ್ಡ ಊರು ಅದು. ನಾನು ಮನುಷ್ಯರ ಆಸ್ಪತ್ರೆಯನ್ನು ಬೇಡಲಿಲ್ಲ. ದನಗಳ ಆಸ್ಪತ್ರೆಯನ್ನು ಬೇಡಿದೆ, ಮಾನ್ಯ ಕೃಷ್ಣಾರೆಡ್ಡಿಯವರು ಬಾಬುರೆಡ್ಡಿಯಂವರಿಗೆ ಸಣ್ಣ ಆಸ್ಪತ್ರೆಯನ್ನು ಕೊಡಲಿಲ್ಲವೆಂದರೆ ಹೇಗೆ? ಅಧಿಕಾರಿಗಳು ೫೫ ಸಾವಿರ ರೂಪಾಯಿ ಮಂಜೂರಾಗಿದೆ ಎಂದು ಹೇಳಿದರು. ಅದನ್ನು ತಾವು ಕೊಡಬೇಕು. ನಿವೇಶನ ಒದಗಿಸಿಕೊಟ್ಟಿದ್ದೇನೆ. ಆದಷ್ಟು ಜಾಗ್ರತೆ ಕಟ್ಟಡವನ್ನು ಕಟ್ಟಿಸಿ ಕೊಡಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಜಮಖಂಡಿ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಮೊದಲೇ ಪ್ರಾರಂಭವಾಗಿದೆ, ಆಗ ತಾತ್ಕಾಲಿಕವಾಗಿ ಒಂದು ಪಟಾಯಿತಿ ಕಟ್ಟಡದಲ್ಲಿ ಪ್ರಾರಂಭವಾಯಿತು. ನಂತರ ಬೇರೊಂದು ಕಟ್ಟಡಕ್ಕೆ ವರ್ಗಾವಣೆ ಆಯಿತು. ಆ ಕಟ್ಟಡ ಬಾರಿಸ್ತಿಯಲ್ಲಿದೆ. ತವಗೆ ಗೊತ್ತಿರುವ ಹಾಗೆ ಮೊದಲಿನಿಂದ ಜಾನುವಾರಂಗಳ ಸಂಖ್ಯೆ, ಜನರ ಬೇಡಿಕೆ ಇವುಗಳನ್ನು ನೋಡಿ ಪಶುವೈದ್ಯ ಶಾಲೆಯನ್ನು ಪ್ರಾರಂಭ ಮಾಡುತಕ್ಕದ್ದು ಇದೆ. ಈಗ ರಾಷ್ಟ್ರೀಯ ಉದ್ಯೋಗ ಯೋಜನೆ ಮತ್ತು ಜಿಲ್ಲಾಮಟ್ಟದ ಯೋಜನೆಯ ಅಡಿಯಲ್ಲಿ ಕಟ್ಟಡ ಕಟ್ಟಿಸಿಕೊಡತಕ್ಕ ವ್ಯವಸ್ಥೆ ಇದೆ. ನಾನು ಕೂಡ ಮಾನ್ಯ ತುಂಗಳ್

ರವರು ಹೇಳಿದ್ದರ ಬಗ್ಗೆ ವಿಚಾರ ಮಾಡಿದ್ದೆ. ಜಿಲ್ಲಾ ಮಟ್ಟದ ಯೋಜನೆ ಏನಿದೆ ಅದರಲ್ಲಿ ಪಶುವೈದ್ಯ ಶಾಲೆಯನ್ನು ಕಟ್ಟುವ ಪ್ರಯತ್ನ ಮಾಡಿ ಜಿಲ್ಲಾ ಅಧಿಕಾರಿಗಳಿಗೆ ಬರೆಯುತ್ತೇನೆಂದು ಬರೆದಿದ್ದೇನೆ. ಆದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮಕ್ಕೆಗೊಳ್ಳಲು ಪ್ರಯತ್ನ ಮಾಡುತ್ತೇನೆ.

ಸಂಡೂರು ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ

೧೪೩೬. **ಶ್ರೀ ಯು. ಭೂಪತಿ (ಸಂಡೂರು).**— ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(೧) ಸಂಡೂರು ತಾಲ್ಲೂಕಿನ ಮಾದಾಪುರ ದರೋಜಿ, ಹಳೇದರೋಜಿ ಮುಂತಾದ ಸುತ್ತಮುತ್ತಲಿನ ಗ್ರಾಮಂಗಳಲ್ಲಿ ಕರಡಿಗಳಿಂದ ಬೆಳೆಗೆ ಹಾನಿಯಾಗಿ ಮತ್ತು ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(೨) ಹಾಗಿದ್ದಲ್ಲಿ, ಅರಣ್ಯ ಇಲಾಖೆಯವರು ಇಲ್ಲಿಯವರೆಗೆ ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಮಾಡದೇ ಇರಲು ಕಾರಣಗಳೇನು ?

(೩) ಆ ಪ್ರದೇಶದ ರೈತರ ಹಾಗೂ ಅವರ ಬೆಳೆಗಳನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್. (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

(೧) ಹೌದು.

(೨) ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಮಾಡಲಾಗಿದ್ದರೂ ಸಫಲವಾಗಲಿಲ್ಲ. ಆದರೆ ಇಲಾಖೆಯು ಪ್ರಯತ್ನ ಇನ್ನೂ ನಡೆಯುತ್ತಲಿದೆ.

(೩) ಸಂಬಂಧಪಟ್ಟ ಪ್ರದೇಶದಲ್ಲಿರುವ ಅರಣ್ಯ ರಕ್ಷಕ ಸಿಬ್ಬಂದಿಗಳು ಗ್ರಾಮಗಳಿಗೆ ಕರಡಿಗಳು ಬಂದು ಹಾವಳಿ ಮಾಡದಂತೆ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆಕಸ್ಮಿಕವಾಗಿ ರೈತರ ಬೆಳೆಗಳಿಗೆ ಹಾನಿ ಉಂಟಾದ ಪಕ್ಷದಲ್ಲಿ ಕಾನೂನು ರೀತ್ಯಾ ಪರಿಹಾರ ಕೊಡಲಾಗುತ್ತದೆ.

ಶ್ರೀ ಯು. ಭೂಪತಿ.—ಇದು ನೀರಾವರಿ ಪ್ರಾಂತ್ಯದ ಪ್ರಶ್ನೆ. ಮೂರು ಹಳ್ಳಿಗಳಾದ ದರೋಜಿ, ಮಾದಾಪುರ ಮತ್ತು ಹಳೇ ದರೋಜಿ ಭಾಗದಲ್ಲಿ ರಸ್ತೆ ಇದೆ. ಪಕ್ಕದಲ್ಲಿ ದೊಡ್ಡ ಬೆಟ್ಟ ಇದೆ. ಅಲ್ಲಿ ೨೦೦ಕ್ಕೂ ಹೆಚ್ಚು ಕರಡಿಗಳು ವಾಸಿಸುತ್ತಿವೆ. ಸಂಜೆ ೫ ಗಂಟೆ ಆದ ತಕ್ಷಣ ಕರಡಿಗಳು ಇಳಿದು ನೇರವಾಗಿ ಹಳ್ಳಿಗಳ ಕಡೆ ಬರುತ್ತಿವೆ. ಹಲವಾರು ಜನರನ್ನು ಮಕ್ಕಳನ್ನು ಹೆಣ್ಣು ಮಕ್ಕಳನ್ನು ಕಡಿದಿವೆ. ಗದ್ದೆಯ ಬೆಳೆಯನ್ನು ನಾಶ ಮಾಡಿವೆ. ಕರಡಿಗಳನ್ನು ಸ್ಥಳಾಂತರಿಸುವ ಕಾರ್ಯ ಮಾಡಿದರೂ ಸಫಲವಾಗಲಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಏನು ಕಾರ್ಯ ಮಾಡಿದಿರಿ ? ಏತಕ್ಕೆ ಸಫಲವಾಗಲಿಲ್ಲ ?

ಶ್ರೀ ಜೆ. ಎಸ್. ದೇಶ್‌ಮುಖ್.—ಕರಡಿಗಳು ಹಿಂಡು ಹಿಂಡಾಗಿ ಬರುತ್ತಿವೆ. ಅವುಗಳನ್ನು ಬಲೆ ಹಾಕಿ ಹಿಡಿಯಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅವು ಸುಮಾರು ೩-೪ ನೂರು ಇವೆ. ಅವುಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಪರಿಹಾರಧನ ಬೇಕಾದರೆ ಹೆಚ್ಚು ಕೊಡಬಹುದು.

ಶ್ರೀ ಯು. ಭೂಪತಿ.—ಕರಡಿಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ನೀವು ಅರಣ್ಯ ಇಲಾಖೆಯ ಮಂತ್ರಿಗಳಾಗಿರುವುದಕ್ಕೆ ಲಾಯಕ್ಕಿಲ್ಲ. ನೀವು ಹಿಡಿಯಲಿಲ್ಲವೆಂದರೆ ಇನ್ನು ಯಾರು ಹಿಡಿಯಬೇಕು? ಸರ್ಕಾರವೇ ಜವಾಬ್ದಾರಿ ಹೊತ್ತುಕೊಳ್ಳದಿದ್ದರೆ ಇನ್ನು ಯಾರು ಹೊತ್ತುಕೊಳ್ಳಬೇಕು?

ಅಧ್ಯಕ್ಷರು.—ಹೇಳುತ್ತಾರೆ ದಯವಿಟ್ಟು ಕೂಡ್ರಿ.

ಶ್ರೀ ಯು. ಭೂಪತಿ.—ಅರಣ್ಯ ಇಲಾಖೆ ಅಧಿಕಾರಿಗಳ ಕಡೆಯಿಂದ ಆಗುವುದಿಲ್ಲ, ಅಥವಾ ಸರ್ಕಾರದ ಕಡೆಯಿಂದ ಆಗುವುದಿಲ್ಲ ಎಂದರೆ ಯಾರ ಕಡೆಯಿಂದ ಆಗಬೇಕು? ಅಲ್ಲಿ ೩೦೦-೪೦೦ ಕರಡಿಗಳಿವೆ.